# ಪುನಶ್ಚೇತನ

ವಿಮರ್ಶಾ ಲೇಖನಗಳ ಸಂಗ್ರಹ

ಪ್ರಧಾನ ಸಂಪಾದಕರು
ಪ್ರೊ. ನೀಲಗಿರಿ ತಳವಾರ

ಸಂಪಾದಕರು
ಡಾ. ಸಿ.ಟಿ. ಜಯಣ್ಣ
ಡಾ. ಅಶೋಕ ಜಿ.ಎಸ್.



Scanned with CamSca

**PUNASHECHTHANA :** Collection of Criticle Essay's.

Published by
**Allamaprabhu Samshodhana Kendra**
Sri Jagdguru Murugarajendra Granthamale
Basavakendra, Sri Murughamata, Chitradurga 577 502

First Edition : 2019

Pages : 370

Copies : 1000

Price: 400/-

Size : Demy 1/8

Paper Used : 70 GSM NS Maplitho

© : Reserved

ISBN: 978-81-93441-91-6

ಪ್ರಥಮ ಮುದ್ರಣ: 2019

ಪುಟಗಳು: 370

ಪ್ರತಿಗಳು: 1000

ಬೆಲೆ: 400/-

ಅಳತೆ: ಡೆಮಿ 1/8

ಕಾಗದ: 70 ಜಿಎಸ್ಎಂ ಎನ್.ಎಸ್. ಮ್ಯಾಪಲೀಥೊ

ಮುಖಪುಟ ವಿನ್ಯಾಸ : ಎಸ್. ಮಂಜುನಾಥ್

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

Scanned with CamSca

# 6. ವಚನ ಸಾಹಿತ್ಯದಲ್ಲಿ ಕಾವ್ಯದ ಪರಿಕಲ್ಪನೆ

ಡಾ. ಸಿ.ಟಿ. ಜಯಣ್ಣ

ವಚನಗಳಲ್ಲಿ ಅಂತರ್ಗತವಾಗಿರುವ ಕಾವ್ಯತ್ವದ ಬಗ್ಗೆ ಈಗಾಗಲೇ ಸಾಕಷ್ಟು ವಿವೇಚನೆಯು ನಡೆದಿದೆ. ವಚನಕಾರರಿಗೆ ಕಾವ್ಯರಚನೆಯು ಉದ್ದೇಶಪೂರ್ವಕವಾದ ಕ್ರಿಯೆಯೂ ಆಗಿರಲಿಲ್ಲ. ತಾವು ಹೇಳಿದ ಹಲವು ಮಾತುಗಳು ಸುಂದರ ಕಾವ್ಯಗಳೆಂಬ ಪರಿವೆಯೂ ಅವರಿಗಿರಲಿಲ್ಲ; ಕಾವ್ಯವನ್ನು ಸಂಪೂರ್ಣವಾಗಿ ಜೀವನಕ್ಕೆ ಸಂಬಂಧಿಸಿರುವಂತೆ ರಚಿಸಿರುವುದು ಇಲ್ಲಿಯೇ ಎನ್ನಬಹುದೇನೋ. ವಚನಕಾರರು 'ನಡೆದು ನುಡಿದುದೇ' ವಚನಗಳೆಂದು ಸಂಕಲನಕಾರನೊಬ್ಬನು ಹೇಳಿರುವುದು ಸಮಂಜಸವಾದುದು. ಈ ಸಹಜವಾದ ಕಾವ್ಯ ರಚನೆಯನ್ನು ಗುರುತಿಸಿದ ಜಾನಪದ ಕವಿಯೊಬ್ಬನು ವಚನಗಳನ್ನು ಕುರಿತು ಈ ರೀತಿ ಹೇಳುತ್ತಾನೆ:

"ಶಿವಶರಣ ದುಂಬಿಗಳು ಭವದೊಳಗೆ ಹಾರ್‍ದಾರಿ
ಶಿವಮತದ ಹುಟ್ಟು ಕಟ್ಟಿದುವು! ವಚನಗಳು
ಸವೆಯದುಳಿದಿರುವ ಜೇನುಗಳು"

ವಚನಕಾರರು ದುಂಬಿಗಳಂತೆ ಅತ್ಯಂತ ಸಹಜವಾಗಿ ಲೋಕಾನುಭವದ ಸಾರವನ್ನು ಜೇನಿನಂತೆ ಮಧುರವೂ ಸತ್ವಯುತವೂ ಆದ, ಆದರೆ ಸವಿದಷ್ಟೂ ಸವೆಯದ, ವಚನಗಳಾಗಿ ಕಟ್ಟಿದ್ದಾರೆಂಬ ತ್ರಿಪದಿಕಾರನ ಮಾತು ಸುಂದರವಾದ ರೀತಿಯಲ್ಲಿ ವಚನಗಳನ್ನು ವರ್ಣಿಸುತ್ತದೆ.

ವಿಸ್ಮಯವು ಕವಿಯ ಪ್ರಮುಖವಾದ ಪ್ರತಿಕ್ರಿಯೆ. ಈ ವಿಸ್ಮಯದ ಉದ್ಗಾರವೇ ಅನೇಕ ಬಾರಿ ಕಾವ್ಯವಾಗುತ್ತದೆ. ಪ್ರಕೃತಿಯ ವ್ಯಾಪಾರಗಳನ್ನೂ, ಅಲ್ಲಿಯ ವೈಶಿಷ್ಟ್ಯಗಳನ್ನೂ ಕಂಡು ವಚನಕಾರರಿಗೆ ಸೃಷ್ಟಿಶಕ್ತಿಯ ಅಪಾರ ಸಾಮರ್ಥ್ಯವೂ ರಹಸ್ಯಪೂರ್ಣತೆಯೂ ವಿಸ್ಮಯವನ್ನುಂಟು ಮಾಡುತ್ತವೆ.

"ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ

Link to the reco
Year of
ISSN number
Link to website

ಬ್ರಹ್ಮ ಧೂಪ, ವಿಷ್ಣು ದೀಪ
ರುದ್ರನೋಗರ ಸಯಿಧಾನ ನೋಡಾ!
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!"

ಎನ್ನುವಂತೆ ಕಾಣಿಸುತ್ತದೆ. ಇಂತಹುದೇ ಭಾವನೆಯು ಅಕ್ಕಮಹಾದೇವಿಯ ವಚನದಲ್ಲಿಯೂ ಕಾಣುತ್ತದೆ.

"ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ,
ವಾಯುವಿನ ಚಲನೆ, ತರುಗುಲ್ಮಲತಾದಿಗಳಲ್ಲಿಯ ತಳಿರು ಪುಷ್ಪ,
ಷಡುವರ್ಣಂಗಳೆಲ್ಲ ಹಗಲಿನ ಪ್ರಭೆ,
ಚಂದ್ರಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತ್ ಆದಿಗಳು
ದೀಪ್ತಿಮಯರೆನಿಪ್ಪವೆಲ್ಲ ಇರುಳು ನಿನ್ನ ಪೂಜೆ
ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರಿದಿಪ್ಪೆನಯ್ಯಾ
ಚನ್ನಮಲ್ಲಿಕಾರ್ಜುನ"

ಆದಯ್ಯ ತನ್ನದೊಂದು ವಚನದಲ್ಲಿ ಇಡೀ ಪ್ರಕೃತಿಯನ್ನೇ 'ಚೈತನ್ಯ' ಜಂಗಮವೆಂದು ಕರೆದು ಪ್ರಕೃತಿಯ ನಾನಾ ವಸ್ತುಗಳನ್ನೇ ಜಂಗಮದ ಪರಿಕರಗಳಾಗಿ ವರ್ಣಿಸುತ್ತಾನೆ. ಇಂತಹ ಮನೋಭಾವದಿಂದಿರುವ ಶರಣರಿಗೆ ಆಗುವುದೆಲ್ಲ ಶಿವಕಾರುಣ್ಯವೆಂಬ ಭಾವನೆಯಿರುತ್ತದೆ. ಶಿವನನ್ನೇ ನಂಬಿದವನಿಗೆ ಮತ್ತಾವ ನೋವೂ, ದುರಂತವೂ ದೊಡ್ಡದೆನಿಸದೆ, ಅದನ್ನೇ ಪ್ರಸಾದವೆಂದು ಸ್ವೀಕರಿಸುವ ಮನೋಭಾವವಿರುತ್ತದೆ. ಇಂತಹ ಮನೋಭಾವವು ಮಹಾದೇವಿಯಕ್ಕನಿಂದ ಸುಂದರವಾದ ವಚನವೊಂದನ್ನು ಹಾಡಿಸಿದೆ.

"ಕಿಡಿಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು
ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು
ಚನ್ನಮಲ್ಲಿಕಾರ್ಜುನಯ್ಯಾ,
ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು".

ಈ ವಚನದಲ್ಲಿ ಒಂದಾದ ಮೇಲೊಂದರಂತೆ ಪ್ರಕೃತಿಯ ಮುನಿಸಿನಿಂದ ಘಾಸಿಪಡುವಂತಾದರೂ ಅದನ್ನು ತಾನು ಕೃಪೆಯೆಂದು ಭಾವಿಸುತ್ತೇನೆಂದು ಹೇಳಿ, ಕೊನೆಗೆ ಶಿರ ಹರಿದು ಬಿದ್ದರೂ ಶಿವನಿಗರ್ಪಿತವೆಂದು ಭಾವಿಸುತ್ತೇನೆ ಎನ್ನುವವರೆಗೆ ವಚನವು ಕ್ರಮಕ್ರಮವಾಗಿ ಬೆಳೆದು, ಕೊನೆಯ ವಾಕ್ಯದಲ್ಲಿ ತನ್ನ ಔನ್ನತ್ಯವನ್ನು ತಲುಪಿದೆ.

ಈ ಬಗೆಯಲ್ಲಿ ಹಲವಾರು ವಚನಗಳು ವಿಶಿಷ್ಟವಾದ ಕಾವ್ಯಪ್ರಕಾರವಾಗಿ ಕನ್ನಡ ಸಾಹಿತ್ಯದಲ್ಲಿ ಮೆರೆಯುತ್ತಿವೆ. ಮೇಲೆ ಉದಾಹರಿಸಿದ ವಚನಗಳಲ್ಲದೆ, ನೂರಾರು ಇತರ



ವಚನಗಳಲ್ಲಿ ಉತ್ಕೃಷ್ಟ ಕಾವ್ಯಸತ್ವವನ್ನು ನಾವು ಕಾಣಬಹುದು. ಕಾವ್ಯಗುಣದ ಬಗ್ಗೆ ಹೇಳುವಾಗ ಉದಾಹರಿಸಿದ ವಚನಗಳಲ್ಲದೆ, ವಚನಗಳಲ್ಲಿನ ವಸ್ತುವಿನ ಬಗ್ಗೆ ವಿವೇಚಿಸುವಾಗ ವಚನಕಾರರು ಕನ್ನಡ ಭಾಷೆಯನ್ನು ಬಳಸಿಕೊಂಡ ರೀತಿಯ ವಿಷಯವಾಗಿ ವಿವರಣೆ ನೀಡುವಾಗ, ಕೊಟ್ಟ ವಚನೋದ್ಧೃತಗಳಲ್ಲಿ ಹಲವು ಒಳ್ಳೆಯ ಕಾವ್ಯಭಾಗಗಳಾಗಿರುವುದಕ್ಕೂ ಉದಾಹರಣೆಗಳಾಗುತ್ತವೆ. ವಚನಗಳಲ್ಲಿನ ಕಾವ್ಯಸತ್ವದ ಬಗ್ಗೆ ವ್ಯಾಪಕವಾದ ಚರ್ಚೆಯು ನಮಗೆ ಪ್ರಸ್ತುತವಲ್ಲ; ಇನ್ನೂ ನಾನಾ ದೃಷ್ಟಿಕೋನಗಳಿಂದ ವಚನಗಳಲ್ಲಿ ಹುದುಗಿದ ಕಾವ್ಯಮಯತೆಯನ್ನು ಬಯಲಿಗೆಳೆಯುವ ಸಾಧ್ಯತೆಯಿದ್ದರೂ ಅದಕ್ಕೆ ನಾವು ಕೈ ಹಾಕದೇ ಇರುವುದಕ್ಕೆ ಕಾರಣ ವಿಸ್ತಾರ ಭಯ, ಪುನರಾವರ್ತನೆಯ ಭೀತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಮಗಿರುವ ಪರಿಮಿತಿ. ವಚನಗಳು ಎಲ್ಲ ಅಭಿರುಚಿ, ಎಲ್ಲ ಕಾಲಗಳ ಕಾವ್ಯದ ಮಾನದಂಡದಿಂದಲೂ ಶ್ರೇಷ್ಠ ಸಾಹಿತ್ಯವೆನ್ನಿಸಿಕೊಳ್ಳಬಲ್ಲುವು. ಹಿಂದೆ ವಚನಗಳನ್ನು ಕೇವಲ ಧಾರ್ಮಿಕ ದೃಷ್ಟಿಯಿಂದ ಕಾಣುವ ಪ್ರವೃತ್ತಿಯಿದ್ದರೂ, ಜನಸಾಮಾನ್ಯರಲ್ಲಿಯೂ ಅದರ ಸೊಬಗನ್ನು ಗುರುತಿಸಿದವರಿದ್ದರೆಂಬುದಕ್ಕೆ ವಚನಗಳನ್ನು ವರ್ಣಿಸುವ ತ್ರಿಪದಿಯೇ ನಿದರ್ಶನವಾಗಿದೆ. ಆಧುನಿಕ ಯುಗದಲ್ಲಿ ವಚನಗಳಲ್ಲಿನ ಕಾವ್ಯಮಯತೆಯನ್ನು ಹಲವಾರು ವಿದ್ವಾಂಸರು ವಿಮರ್ಶಕರು ತೋರಿಸಿಕೊಟ್ಟಿದ್ದಾರೆ.

❐



Scanned with CamScanner